

# ಭಗತ್ ಸಿಂಗ್ ಜನಾಧಿಕಾರ ಯಾತ್ರೆ

## 2ನೇ ಹಂತ

## 10 ಡಿಸೆಂಬರ್ 2023 - 3 ಮಾರ್ಚ್ 2024

## ನಮ್ಮೊಂದಿಗೆ ಒಗ್ಗೂಡಿ!

**ಭಗತ್ ಸಿಂಗ್ ನ ಮಾತು ಕೇಳಿ!**
**ಹೊಸ ಕ್ರಾಂತಿಯ ಹಾದಿಯಲ್ಲಿ ನಡೆಯಿರಿ!**

**ಶಿಕ್ಷಣ, ಮತ್ತು ಉದ್ಯೋಗ**
**ನಮ್ಮ ಜನ್ಮಸಿದ್ಧ ಹಕ್ಕು!**

**ಹಿಂದೂ-ಮುಸ್ಲಿಂ-ಕ್ರೈಸ್ತರೆಲ್ಲರ**
**ಪೀಡೆಗೆ ಕಾರಣ ಹಣದುಬ್ಬರ!**

**ಜಾತಿ-ಧರ್ಮದ ಜಗಳ ತೊಲಗಿಸಿ**
**ಯೋಗ್ಯ ಹೋರಾಟಕ್ಕೆ ಕೈ ಜೋಡಿಸಿ!**

ಸ್ನೇಹಿತರೇ!

'ಭಗತ್ ಸಿಂಗ್ ಜನಾಧಿಕಾರ ಯಾತ್ರೆ'ಯ 2ನೆ ಹಂತದಲ್ಲಿ ನಾವು ನಿಮ್ಮೊಂದಿಗೆ ಬಂದಿದ್ದೇವೆ. ಸಾರ್ವಜನಿಕರ ಮೂಲಭೂತ ಹಕ್ಕುಗಳ ಹೋರಾಟವನ್ನು ಮುಂದುವರಿಸುವುದು, ಸಾರ್ವಜನಿಕರನ್ನು ಜಾಗೃತಗೊಳಿಸುವುದು, ಸಜ್ಜುಗೊಳಿಸುವುದು ಮತ್ತು ಸಂಘಟಿಸುವುದು ಈ ಯಾತ್ರೆಯ ಗುರಿಯಾಗಿದೆ. **ಈ ಯಾತ್ರೆ 10 ಡಿಸೆಂಬರ್ 2023 ರಂದು ಕರ್ನಾಟಕದ ಬೆಂಗಳೂರಿನಿಂದ ಪ್ರಾರಂಭವಾಗಿ 13 ರಾಜ್ಯಗಳು ಮತ್ತು 80 ಕ್ಕೂ ಹೆಚ್ಚು ಜಿಲ್ಲೆಗಳನ್ನು ಹಾದು 8500 ಕಿಲೋಮೀಟರ್ ದೂರವನ್ನು ಕ್ರಮಿಸಿ 3 ಮಾರ್ಚ್ 2024 ರಂದು ದೆಹಲಿಯನ್ನು ತಲುಪಲಿದೆ.** ನೀವೆಲ್ಲರೂ ಇದರಲ್ಲಿ ಭಾಗವಹಿಸಬೇಕು.

ದೇಶದ ಸಾಮಾನ್ಯ ದುಡಿಯುವ ಜನರ ಜೀವನ ಪರಿಸ್ಥಿತಿ ನಮಗೆ ತಿಳಿದೇ ಇದೆ. ಹಣದುಬ್ಬರ, ನಿರುದ್ಯೋಗ ಮತ್ತು ಭ್ರಷ್ಟಾಚಾರ ಜನರ ಬದುಕನ್ನು ನರಕದಂತೆ ಮಾಡಿದೆ. ನಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರ, ಗುಣಮಟ್ಟದ ವೈದ್ಯಕೀಯ ಸೇವೆ ಮತ್ತು ಒಳ್ಳೆಯ ಶಿಕ್ಷಣ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ. ಈ ನೈಜ ವಿಷಯಗಳ ಬಗ್ಗೆ ನಾವು ಯೋಚಿಸದಂತೆ ಮಾಡಿ, ದೇಶದ ಆಡಳಿತಗಾರರು ನಮ್ಮನ್ನು ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಹೊಡೆದಾಡುವಂತೆ ಮಾಡುತ್ತಾರೆ. ಮಂದಿರ-ಮಸೀದಿ, ಮೀಸಲಾತಿಯ ಹೊಸ ಹೊಸ ಘೋಷಣೆಗಳು ಮತ್ತು ಅಂಧ ರಾಷ್ಟ್ರೀಯತೆಯ ಉನ್ಮಾದದಲ್ಲಿ ನಮ್ಮನ್ನು ಸಿಲುಕಿಸುತ್ತಲೇ ಇರುತ್ತಾರೆ.

ಎಲ್ಲಾ ಲೂಟಿಕೋರ ಆಡಳಿತಗಾರರಂತೆ, ನಮ್ಮ ದೇಶದ ಆಡಳಿತಗಾರರೂ ಸಹ ನಮ್ಮ ಬಡತನ, ದುಃಖ, ನಿರುದ್ಯೋಗ, ನೆಲೆಯಿಲ್ಲದಿರುವಿಕೆ ಮತ್ತು ಸಾಮಾಜಿಕ-ಆರ್ಥಿಕ ಅಭದ್ರತೆಗೆ ನಾವೇ ಹೊಣೆ ಎಂದು ನಮ್ಮನ್ನು ನಂಬಿಸಲು ಬಯಸುತ್ತಾರೆ. ಪ್ರತಿದಿನ 18 ಗಂಟೆ ಕೆಲಸ ಮಾಡಲು ಸಿದ್ಧರಿಲ್ಲದ ಕಾರಣ ನಾವು ಅಪ್ರಯೋಜಕರೇ?! ನಮಗೆ ಹೆಚ್ಚು ಮಕ್ಕಳಿರುವುದರಿಂದ ನಾವು ನಿರುದ್ಯೋಗಿಗಳಾಗಿದ್ದೇವೆಯೇ?! ಅಂತರ್ರಾಷ್ಟ್ರೀಯ ಆರ್ಥಿಕತೆಯ ಕುಸಿತದಿಂದ ಭಾರತದಲ್ಲಿ ನಿರುದ್ಯೋಗ ಮತ್ತು ಹಣದುಬ್ಬರ ಹೆಚ್ಚುತ್ತಿದೆ ಎಂದು ನಮ್ಮ ದೇಶದ ಆಡಳಿತಗಾರರು ನಮಗೆ ಹೇಳುತ್ತಾರೆ! ನಿರುದ್ಯೋಗ, ಹಣದುಬ್ಬರ ಇತ್ಯಾದಿಗಳು ಸರ್ಕಾರದ ತಪ್ಪಲ್ಲ ಎಂದು ನಾವು ನಂಬುವಂತೆ ಮಾಡಲಾಗುತ್ತಿದೆ. ಇವುಗಳು ಭೂಕಂಪ ಅಥವಾ ಸುನಾಮಿಯಂತಹ ನೈಸರ್ಗಿಕ ವಿಕೋಪಗಳಂತೆ, ಅದರ ಮೇಲೆ ಯಾರಿಗೂ ನಿಯಂತ್ರಣವಿಲ್ಲವಂತೆ! **ಆದರೆ ಆಡಳಿತ ವರ್ಗ ಕಲಿಸುತ್ತಿರುವ ಈ ಪಾಠದಲ್ಲಿ ಏನಾದರೂ ಸತ್ಯವಿದೆಯೇ? ಖಂಡಿತ ಇಲ್ಲ! ನಾವು ಹೆಚ್ಚುತ್ತಿರುವ ನಿರುದ್ಯೋಗ, ಹಣದುಬ್ಬರ, ಸಾಮಾಜಿಕ ಮತ್ತು ಆರ್ಥಿಕ ಅಭದ್ರತೆಯನ್ನು ಅದೃಷ್ಟ ಅಥವಾ ಹಣೆಬರಹದ ಖಾತೆಯಾಗಿ ಸ್ವೀಕರಿಸಲಿ ಎಂದು ನಮಗೆ ಈ ಪಾಠ ಕಲಿಸಲಾಗುತ್ತಿದೆ. ಎಲ್ಲಾ ದರೋಡೆಕೋರ ಆಡಳಿತಗಾರರು ಯಾವಾಗಲೂ ಇದನ್ನೇ ಬಯಸುತ್ತಾರೆ.**

ಸತ್ಯವೆಂದರೆ ಕಳೆದ 10 ವರ್ಷಗಳಲ್ಲಿ, ಭಾರತದ ದುಡಿಯುವ ಜನರ ಜೀವನಮಟ್ಟ ಮತ್ತು ಕೆಲಸದ ಪರಿಸ್ಥಿತಿಗಳಲ್ಲಿ ಅಭೂತಪೂರ್ವ ಕುಸಿತ ಕಂಡುಬಂದಿದೆ. ಇದಕ್ಕೆ ಪ್ರಸ್ತುತ ಸರ್ಕಾರದ ಜನವಿರೋಧಿ ನೀತಿಗಳೇ ಕಾರಣ. ಈ ಹಿಂದೆಯೂ ಎಲ್ಲಾ ಸರ್ಕಾರಗಳು ದೇಶದ ಮಾಲೀಕರು, ಗುತ್ತಿಗೆದಾರರು, ಭೂಮಾಲೀಕರು, ದಲ್ಲಾಳಿಗಳು ಮತ್ತು ಮಧ್ಯವರ್ತಿಗಳ ಹಿತಾಸಕ್ತಿಗಳನ್ನು ಪೂರೈಸುತ್ತಿದ್ದವು. ಆದರೆ 2014 ರಿಂದ ಪ್ರಸ್ತುತ ಮೋದಿ ಸರ್ಕಾರವು ದೊಡ್ಡ ಕಾರ್ಪೊರೇಟ್ ಉದ್ಯಮಿಗಳಿಗೆ ಬಹಿರಂಗವಾಗಿ ಸೇವೆ ಸಲ್ಲಿಸುವುದರಲ್ಲಿ ಹಾಗೂ ಜನಸಮಾನ್ಯರನ್ನು ಲೂಟಿ ಮಾಡುವುದರಲ್ಲಿ ಹಿಂದಿನ ಎಲ್ಲಾ ಸರ್ಕಾರಗಳ ದಾಖಲೆಗಳನ್ನು ಮುರುದಿದೆ. ಈ ಸತ್ಯವನ್ನು ಇಂದು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

## ಹಣದುಬ್ಬರವು ಎಲ್ಲಾ ದಾಖಲೆಗಳನ್ನು ಏಕೆ ಮುರಿಯುತ್ತಿದೆ?

ಹಣದುಬ್ಬರ ಏಕೆ ಹೆಚ್ಚುತ್ತಿದೆ? ವಿವಿಧ ಸರಕುಗಳು ಮತ್ತು ಸೇವೆಗಳ ಬೆಲೆಗಳು ಕಾಲಕಾಲಕ್ಕೆ ಹೆಚ್ಚಾಗುತ್ತಿರುವ ಮೂಲ ಕಾರಣ ನಮ್ಮ ಉತ್ಪಾದನೆ, ವಿನಿಮಯ ಮತ್ತು ವಿತರಣೆಯ ವ್ಯವಸ್ಥೆ. ಈ ವ್ಯವಸ್ಥೆ ಸಾರ್ವಜನಿಕರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಯೋಜಿತ ರೀತಿಯಲ್ಲಿ ಕೆಲಸ ಮಾಡುವ ಬದಲು ಅರಾಜಕವಾಗಿ ಬೆರಳೆಣಿಕೆಯಷ್ಟು ಶ್ರೀಮಂತರ ಬೊಕ್ಕಸವನ್ನು ತುಂಬುವ ಕೆಲಸ ಮಾಡುತ್ತದೆ. ಇಂತಹ ಅರಾಜಕ ಮತ್ತು ಅಸ್ತವ್ಯಸ್ತವಾಗಿರುವ ವ್ಯವಸ್ಥೆಯಲ್ಲಿ, ವಿವಿಧ ಸರಕುಗಳ ಬೆಲೆಗಳು ವಿವಿಧ ಸಮಯಗಳಲ್ಲಿ ಹೆಚ್ಚಾಗುತ್ತವೆ ಮತ್ತು ಕಡಿಮೆಯಾಗುತ್ತವೆ. **ಆದರೆ ಇಂದು ನಮ್ಮ ದೇಶದಲ್ಲಿ ಹಣದುಬ್ಬರ ಎಲ್ಲಾ ದಾಖಲೆಗಳನ್ನು ಮುರಿಯುವುದರ ಹಿಂದೆ ಒಂದು ವಿಶೇಷವಾದ ಕಾರಣವಿದೆ: ಒಂದು ಕಡೆ, ಮೋದಿ ಸರ್ಕಾರವು ಶ್ರೀಮಂತರ ಹಿತಾಸಕ್ತಿಗಳನ್ನು ಪೂರೈಸಲು ಶ್ರೀಮಂತರಿಗೆ ತೆರಿಗೆ ವಿನಾಯಿತಿಯನ್ನು ಮತ್ತು ಅನೇಕ ರಿಯಾಯಿತಿಗಳನ್ನು ನೀಡಿದೆ. ಮತ್ತೊಂದೆಡೆ, ಸಾಮಾನ್ಯ ಜನರ ಮೇಲಿನ ತೆರಿಗೆಯ ಹೊರೆ ಹೆಚ್ಚಾಗುತ್ತಲೇ ಇದೆ.** ಕಳೆದ 10 ವರ್ಷಗಳಲ್ಲಿ ಮೋದಿ ಸರ್ಕಾರವು ದೊಡ್ಡ ಮಾಲೀಕರು, ಕಂಪನಿಗಳು ಇತ್ಯಾದಿಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆ, ಅವರಿಗೆ ಭೂಮಿ, ವಿದ್ಯುತ್, ನೀರು, ಸಾಲಗಳಲ್ಲಿಯೂ ಸಹ ಭಾರಿ ರಿಯಾಯಿತಿಗಳನ್ನು ನೀಡಿದೆ ಮತ್ತು ಸಾಮಾನ್ಯ ಜನರ ಮೇಲೆ ಪರೋಕ್ಷ ತೆರಿಗೆಗಳ ಹೊರೆಯನ್ನು ತೀವ್ರವಾಗಿ ಹೆಚ್ಚಿಸಿದೆ.

2017ರ ಮೊದಲು, ಒಟ್ಟು ಸರ್ಕಾರದ ತೆರಿಗೆ ಆದಾಯದ 32 ಪ್ರತಿಶತವು ಶ್ರೀಮಂತರಿಂದ ಸಂಗ್ರಹಿಸಲಾದ ಕಾರ್ಪೊರೇಟ್ ತೆರಿಗೆಯಿಂದ ಬರುತ್ತಿತ್ತು. 2023ರ ಹೊತ್ತಿಗೆ, ಇದು 24 ಪ್ರತಿಶತಕ್ಕಿಂತ ಕಡಿಮೆಯಾಗಿದೆ. ಇದೇ ಸಮಯದಲ್ಲಿ ಶ್ರೀಮಂತರ ಲಾಭ ತೀವ್ರವಾಗಿ ಹೆಚ್ಚಾಗಿದೆ. ಮತ್ತೊಂದೆಡೆ, ಜಿಎಸ್ಟಿ ಮತ್ತು ಇತರ ಶುಲ್ಕಗಳ ಮೂಲಕ ಸಾಮಾನ್ಯ ಜನರ ಮೇಲಿನ ತೆರಿಗೆ ಹೊರೆ ಹೆಚ್ಚಿಸಲಾಗಿದೆ. ಸಾಮಾನ್ಯ ಜನರು ಕಟ್ಟುವ ತೆರಿಗೆ ಈಗ ಒಟ್ಟು ತೆರಿಗೆ ಆದಾಯದ ಅರ್ಧಕ್ಕಿಂತ ಹೆಚ್ಚು! ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಸುಮಾರು 60 ಪ್ರತಿಶತವು ಕೇವಲ ತೆರಿಗೆಯಾಗಿದೆ. 2021-22ರಲ್ಲಿ ಕೇಂದ್ರ

## ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಶೇಕಡ 60ರಷ್ಟು ತೆರಿಗೆ!

ಸರ್ಕಾರವು 3.73 ಲಕ್ಷ ಕೋಟಿ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ಒಟ್ಟಾಗಿ 2.02 ಲಕ್ಷ ಕೋಟಿ ರೂಪಾಯಿಗಳನ್ನು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯಲ್ಲಿ ಸಂಗ್ರಹಿಸಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಏರಿಕೆಯಾದಾಗ, ಅದು ಪ್ರತಿ ವಸ್ತುವಿನ ಬೆಲೆಯ ಮೇಲೆ ಪರಿಣಾಮ ಬೀರುತ್ತದೆ. ಅಂತೆಯೇ, ಕೇಂದ್ರ ಸರ್ಕಾರವು ಕಳೆದ 10 ವರ್ಷಗಳಲ್ಲಿ ಎಲ್.ಪಿ.ಜಿ. ಬೆಲೆಯನ್ನು ಮೂರು ಪಟ್ಟು ಹೆಚ್ಚಿಸಿದೆ. ಇದು ಸಾಮಾನ್ಯ ಜನರ ಆರ್ಥಿಕತೆಯ ಮೇಲೆ ನೇರ ಮತ್ತು ಭೀಕರ ಪರಿಣಾಮ ಬೀರಿದೆ.

**ದೊಡ್ಡ ಉದ್ಯಮಿಗಳಿಗೆ ನೀಡಿರುವ ಭಾರೀ ತೆರಿಗೆ ವಿನಾಯಿತಿಯನ್ನು ಸರಿದೂಗಿಸಬೇಕು ಎಂಬ ಕಾರಣಕ್ಕೆ ಮೋದಿ ಸರ್ಕಾರ ಸಾರ್ವಜನಿಕರ ಮೇಲೆ ತೆರಿಗೆ ಹೊರೆ ಹೆಚ್ಚಿಸುತ್ತಿದೆ.** ಬಂಡವಾಳಶಾಹಿಗಳಿಗೆ ನೀಡುತ್ತಿರುವ ರಿಯಾಯಿತಿಯಿಂದ ಸರ್ಕಾರದ ಆದಾಯ ಕಡಿಮೆಯಾಗುತ್ತಿದೆ. ರಾಜಕಾರಣಿಗಳು, ಮಂತ್ರಿಗಳು, ಸಂಸದರು, ಶಾಸಕರು ಮತ್ತು ದೊಡ್ಡ ಅಧಿಕಾರಿಗಳಿಗೆ ನೀಡುವ ಸೌಲಭ್ಯಗಳಲ್ಲಿ ಯಾವುದೇ ಕಡಿತವಾಗದಂತೆ ನೋಡಿಕೊಳ್ಳಲು, ಸಾರ್ವಜನಿಕರ ಮೇಲಿನ ತೆರಿಗೆ ಹೊರೆಯನ್ನು ನಿರಂತರವಾಗಿ ಹೆಚ್ಚಿಸಲಾಗಿದೆ. **ಕಳೆದ 10 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಹಣದುಬ್ಬರದ ಅಭೂತಪೂರ್ವ ಏರಿಕೆಗೆ ನಿಜವಾದ ಕಾರಣವೇ ಇದು. ಇದು ಪ್ರಕೃತಿ ವಿಕೋಪವಲ್ಲ. ಪ್ರಸ್ತುತ ಸರ್ಕಾರದ ನೀತಿಗಳೇ ಇದಕ್ಕೆ ಕಾರಣವಾಗಿದೆ. ಇದರ ಉದ್ದೇಶ: ಬಂಡವಾಳಶಾಹಿಗಳನ್ನು ಓಲೈಸಿ, ಜನರನ್ನು ಲೂಟಿ ಮಾಡಿ ಹಾಳು ಮಾಡುವುದು.**

## ನಿರುದ್ಯೋಗ ಇಷ್ಟು ತೀವ್ರತೆಯಿಂದ ಏಕೆ ಹೆಚ್ಚುತ್ತಿದೆ?

ಹೆಚ್ಚುತ್ತಿರುವ ಜನಸಂಖ್ಯೆಯೇ ನಿರುದ್ಯೋಗಕ್ಕೆ ಕಾರಣ ಎಂದು ನಾವು ಯಾವಾಗಲೂ ಕೇಳುತ್ತೇವೆ. ಇದು ಶುದ್ಧ ಸುಳ್ಳು. ಒಬ್ಬ ವ್ಯಕ್ತಿಯು ಕೇವಲ ಹೊಟ್ಟೆಯೊಂದಿಗೆ ಹುಟ್ಟುವುದಿಲ್ಲ, ಅವನು ಕೈ ಮತ್ತು ಕಾಲುಗಳೊಂದಿಗೆ ಹುಟ್ಟುತ್ತಾನೆ. ಅವನ ಶ್ರಮವು ಪ್ರಕೃತಿಯ ಜೊತೆ ಸೇರಿ ಸಮೃದ್ಧಿಯನ್ನು ಸೃಷ್ಟಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಸರಳ: ಹೆಚ್ಚು ಜನಸಂಖ್ಯೆಯ ಅರ್ಥ, ಹೆಚ್ಚಿನ ಅಗತ್ಯಗಳು; ಹೆಚ್ಚಿನ ಅಗತ್ಯಗಳೆಂದರೆ, ಹೆಚ್ಚು ಉತ್ಪಾದನೆ; ಹೆಚ್ಚು ಉತ್ಪಾದನೆಯ ಅರ್ಥ ಹೆಚ್ಚಿನ ಉದ್ಯೋಗಗಳು. ಕಳೆದ 10 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಆಹಾರ ಉತ್ಪಾದನೆ ಶೇ. 18.3 ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ, ಜನಸಂಖ್ಯೆಯು ಮಾತ್ರ ಶೇಕಡಾ 10.7 ರಷ್ಟು ಹೆಚ್ಚಾಗಿದೆ. ಹಾಗಾದರೆ ದೇಶದಲ್ಲಿ ಹಸಿವು ಮತ್ತು ಅಪೌಷ್ಟಿಕತೆ ಏಕೆ ಹೆಚ್ಚಿದೆ? ಈ ಸಮಸ್ಯೆಗಳಿಗೆ ಜನಸಂಖ್ಯೆಯೇ ಕಾರಣವಾಗಿದ್ದರೆ, ಆಹಾರ ಉತ್ಪಾದನೆ ಹೆಚ್ಚುತ್ತಿರಬೇಕಾದರೆ ಹಸಿವು ಮತ್ತು ಅಪೌಷ್ಟಿಕತೆ ಕಡಿಮೆಯಾಗಬೇಕಿತ್ತು. ಆದರೆ ಆಗುತ್ತಿರುವುದು ಸಂಪೂರ್ಣ ವಿರುದ್ಧವಾಗಿದೆ. **ಹೀಗಾಗಿ ಸತ್ಯ ಸ್ಪಷ್ಟವಾಗಿದೆ: ಜನಸಂಖ್ಯೆಯ ವಿಷಯವು ಕೇವಲ ಒಂದು ನೆಪ ಮಾತ್ರ; ವಾಸ್ತವದಲ್ಲಿ ಸಾಮಾನ್ಯ ಜನರ ಲೂಟಿ ಮಾಡುವುದೇ ಇವರ ಗುರಿ**. ನಿಸ್ಸಂಶಯವಾಗಿ, ವಿದ್ಯಾವಂತ ಸಮಾಜದಲ್ಲಿ ಕುಟುಂಬ ಸಣ್ಣದಾಗಿರುತ್ತದೆ ಮತ್ತು ಕುಟುಂಬ ಯೋಜನೆಯಲ್ಲಿ ಮಹಿಳೆಯರು ಸಕ್ರಿಯ ಪಾತ್ರ ವಹಿಸುತ್ತಾರೆ. ಇದು ಅವರ ಪ್ರಜಾತಂತ್ರಾತ್ಮಕ ಹಕ್ಕು. ಹಾಗಾದರೆ ಇವತ್ತಿನ ಸಮಾಜದಲ್ಲಿರುವ ಅನಕ್ಷರತೆ ಮತ್ತು ಸಂಸ್ಕೃತಿಯ ಕೊರತೆಗೆ ಯಾರು ಕಾರಣ? ಈ ವ್ಯವಸ್ಥೆಯೇ! ಹಸಿವು, ನಿರುದ್ಯೋಗ ಮತ್ತು ಬಡತನಕ್ಕೆ ಜನಸಂಖ್ಯೆ ಕಾರಣವಲ್ಲ ಎಂಬುವುದನ್ನು ಅಂಕಿ ಅಂಶಗಳೊಂದಿಗೆ ತೋರಿಸಬಹುದು.

**ನಿರುದ್ಯೋಗವನ್ನು ಹೆಚ್ಚಿಸುವ ಮೊದಲ ಮೂಲ ಕಾರಣವೆಂದರೆ ಲಾಭ ಆಧಾರಿತ ವ್ಯವಸ್ಥೆ**. ಎಲ್ಲಿ ಉತ್ಪಾದನೆಯ ಉದ್ದೇಶವು ಸಾಮಾನ್ಯ ಜನರ ಕಲ್ಯಾಣ, ಅವರ ಅಗತ್ಯಗಳನ್ನು ಪೂರೈಸುವುದು ಮತ್ತು ಕಾರ್ಮಿಕರಿಗೆ ಮಾನವೀಯ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸುವುದು ಅಲ್ಲವೋ, ಅಲ್ಲಿ ನಿರುದ್ಯೋಗವು ಖಂಡಿತವಾಗಿಯೂ ಹೆಚ್ಚಾಗುತ್ತದೆ!

### ನಿರುದ್ಯೋಗ ದರದ ಹೊಸ ಅಭೂತಪೂರ್ವ ದಾಖಲೆ - 10.1%!

**ಕಳೆದ 10 ವರ್ಷಗಳಲ್ಲಿ ಅಂಬಾನಿ-ಅಡಾನಿಗಳಂತಹ ಜನರ ಲಾಭಕೋರತನದಲ್ಲಿ ಯಾವುದೇ ಕಡಿತವಾಗಬಾರದು ಎನ್ನುವ ಪ್ರಯತ್ನದಲ್ಲಿ ಮೋದಿ ಸರ್ಕಾರ ಸಂಪೂರ್ಣ ಆರ್ಥಿಕತೆಯನ್ನು ಹದಗೆಡಿಸಿದೆ. ನಿರುದ್ಯೋಗವು ಎಲ್ಲಾ ದಾಖಲೆಗಳನ್ನು ಮುರಿಯಲು ಇದೇ ಮುಖ್ಯ ಕಾರಣ.** ಈ 10 ವರ್ಷಗಳಲ್ಲಿ ಬೀಸಿದ ಖಾಸಗೀಕರಣದ ಬಿರುಗಾಳಿಯು ಭಾರಿ ಕಾರ್ಮಿಕರ ವಜಾಗೊಳಿಸುವಿಕೆಗೆ ಕಾರಣವಾಗಿದೆ. ಕೇವಲ ಸರ್ಕಾರಿ ಅಂಕಿ ಅಂಶಗಳ ಬಗ್ಗೆ ಹೇಳುವುದಾದರೆ, 2016 ರಲ್ಲಿ 41.2 ಕೋಟಿ ಜನರಿಗೆ ಉದ್ಯೋಗವಿತ್ತು, ಆದರೆ 2021 ರಲ್ಲಿ ಆ ಸಂಖ್ಯೆ 40.4 ಕೋಟಿಗೆ ಇಳಿದಿತ್ತು. ಅದು ಕೂಡ 'ಉದ್ಯೋಗಿ'ಗಳ ಅಧಿಕೃತ ವ್ಯಾಖ್ಯಾನವೇನೆಂದರೆ, ನೀವು ಕಳೆದ ವಾರದಲ್ಲಿ ಯಾವುದೇ ದಿನ ಕೆಲಸ ಮಾಡಿದ್ದರೆ, ನಿಮ್ಮನ್ನು 'ಉದ್ಯೋಗಿ' ಎಂದು ಪರಿಗಣಿಸಲಾಗುತ್ತದೆ! 2021ರ ಕೊರೊನಾ ಕಾಲದಲ್ಲಿ ಯುವಕರಲ್ಲಿ ಉದ್ಯೋಗ ದರವು ಶೇಕಡಾ 10.4 ರಷ್ಟಿತ್ತು, **ಅಂದರೆ ಪ್ರತಿ 100 ಯುವಕರಲ್ಲಿ 90 ಮಂದಿ ನಿರುದ್ಯೋಗಿಗಳಾಗಿದ್ದರು** ಮೋದಿ ಸರಕಾರವು ನಿರುದ್ಯೋಗದ ಈ ಭಯಾನಕ ಸ್ಥಿತಿಯನ್ನು ಮುಚ್ಚಿ ಹಾಕಲು ಉದ್ಯೋಗ ಅಂಕಿಅಂಶಗಳನ್ನು ಸಂಗ್ರಹಿಸುವುದನ್ನೇ ನಿಲ್ಲಿಸಿದೆ. ವಾಸ್ತವವೆಂದರೆ ಕಳೆದ ಅಕ್ಟೋಬರ್ 2023 ರಲ್ಲಿ, ನಿರುದ್ಯೋಗ ದರವು ಮತ್ತೊಮ್ಮೆ ಹೊಸ ದಾಖಲೆಯನ್ನು ಸ್ಥಾಪಿಸಿತು ಮತ್ತು ಶೇಕಡಾ 10.1 ಕ್ಕಿಂತ ಹೆಚ್ಚಾಯಿತು (ಮೂಲ: ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕೋನಮಿ). **ಕಳೆದ 10 ವರ್ಷಗಳ ಮೋದಿ ಸರ್ಕಾರದ ಆಡಳಿತದಲ್ಲಿ ಪ್ರತಿ ನಿಮಿಷಕ್ಕೆ 3 ಉದ್ಯೋಗಗಳು, ಪ್ರತಿ ಗಂಟೆಗೆ 182 ಉದ್ಯೋಗಗಳು ಮತ್ತು ಪ್ರತಿದಿನ 4400 ಉದ್ಯೋಗಗಳು ಕಳೆದುಹೋಗಿವೆ.** ಮೊದಲು **ನೋಟ್-ಬಂದಿ** ಮತ್ತು ನಂತರ **ಕೋವಿಡ್ ಸಮಯದಲ್ಲಿ ಹೇರಲಾದ ಕ್ರೂರ ಲಾಕ್ಡೌನ್** ವಿಶೇಷವಾಗಿ ಜನರ ಜೀವನೋಪಾಯವನ್ನು ಧ್ವಂಸಗೊಳಿಸಿತು. ನಿರುದ್ಯೋಗವನ್ನು ಎದುರಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ಬದಲು, ಮೋದಿ ಸರ್ಕಾರವು ರೈಲ್ವೆ, ವಿಮಾನ ನಿಲ್ದಾಣಗಳು, ಬ್ಯಾಂಕುಗಳು, ವಿಮಾ ಸಂಸ್ಥೆಗಳು ಮತ್ತು ಇತರ ಸರ್ಕಾರಿ ಉದ್ಯಮಗಳ ಖಾಸಗೀಕರಣದ ಬಿರುಗಾಳಿಯನ್ನು ಮುಂದುವರೆಸಿದೆ, ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸುವ ಕಾರ್ಮಿಕ ಇಲಾಖೆಯನ್ನು ಕುಂಠಿತಗೊಳಿಸಿ, ಕಾರ್ಮಿಕ ಕಾನೂನುಗಳನ್ನು ಸಂಪೂರ್ಣವಾಗಿ ಮುಗಿಸುವ ತಯಾರಿ ನಡೆಸುತ್ತಿದೆ.

### 2014-22ರ ಮಧ್ಯದಲ್ಲಿ ಕೇಂದ್ರ ಸರ್ಕಾರ ಮಾತ್ರ 7,22,311 ಜನರಿಗೆ ಉದ್ಯೋಗ ನೀಡಿದೆ!

ನಮ್ಮ ದೇಶದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಮತ್ತು ವಿಶೇಷವಾಗಿ ಮೋದಿ ಸರ್ಕಾರವು ಹರಡಿರುವ ಗುತ್ತಿಗೆ ವ್ಯವಸ್ಥೆಯು ಕೂಡ ನಿರುದ್ಯೋಗಕ್ಕೆ ಕಾರಣವಾಗಿದೆ. ಗುತ್ತಿಗೆ, ದಿನಗೂಲಿ ಅಥವಾ ಸಾಂದರ್ಭಿಕ ಕಾರ್ಮಿಕರು ಸಾಮಾನ್ಯವಾಗಿ 10 ರಿಂದ 12 ಗಂಟೆಗಳವರೆಗೆ ಮತ್ತು ಕೆಲವೊಮ್ಮೆ 14 ರಿಂದ 16 ಗಂಟೆಗಳವರೆಗೆ ಕೆಲಸ ಮಾಡುತ್ತಾರೆ. ಭಾರತದ ಒಟ್ಟು ಕಾರ್ಮಿಕರಲ್ಲಿ 94 ಪ್ರತಿಶತದಷ್ಟು ಜನರು ಅಸಂಘಟಿತ ವಲಯದಲ್ಲಿದ್ದಾರೆ ಮತ್ತು ತಾತ್ಕಾಲಿಕ ಗುತ್ತಿಗೆ ಅಥವಾ ಕ್ಯಾಶುಯಲ್ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. 60 ಕೋಟಿಗೂ ಹೆಚ್ಚು ದುಡಿಯುವ ಜನರಲ್ಲಿ 94 ಪ್ರತಿಶತದಷ್ಟು ಜನರು ಪ್ರತಿದಿನ 12 ಗಂಟೆಗಳ ಕಾಲ ಕೆಲಸಮಾಡುತ್ತಿದ್ದಾರೆ. ಅವರಿಗೆ ಮಾತ್ರ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತಂದರೂ ಸುಮಾರು 20 ರಿಂದ 25 ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸಬಹುದು. ಆದರೆ ಮೋದಿ ಸರ್ಕಾರ ಮತ್ತು ನಾರಾಯಣ ಮೂರ್ತಿಯಂತಹ ಮೋದಿಯ ಬಂಡವಾಳಶಾಹಿ ಸ್ನೇಹಿತರು ಜನರಿಗೆ ದಿನಕ್ಕೆ 12 ಗಂಟೆಗಳ ಕಾಲ ಕೆಲಸ

ಮಾಡಲು ಹೇಳುತ್ತಿದ್ದಾರೆ ಏಕೆಂದರೆ ಅವರು ಕೂಡ ಅಷ್ಟೇ ಕೆಲಸ ಮಾಡುತ್ತಾರಂತೆ. ನಾವು ಹೇಳುತ್ತೇವೆ: ಇದು ನಿಮ್ಮ ಕಾರ್ಖಾನೆ, ನೀವೇ ಬಂದು ಇಲ್ಲಿ ದಿನಕ್ಕೆ 12 ಗಂಟೆಗಳ ಕಾಲ ಕೆಲಸ ಮಾಡಿ! ಕಾರ್ಖಾನೆಗಳು, ಗದ್ದೆಗಳು ಮತ್ತು ಗಣಿಗಳು ನಮ್ಮದಾದಾಗ, ಅಗತ್ಯವಿದ್ದರೆ ನಾವೇ ನಮ್ಮ ಇಚ್ಛೆಯಂತೆ 12 ಗಂಟೆಗಳ ಕಾಲ ಕೆಲಸ ಮಾಡಲು ಸಿದ್ಧರಾಗುತ್ತೇವೆ!. ಈಗ ನಮಗೆ 8 ಗಂಟೆಗಳ ಕೆಲಸದ ದಿನವನ್ನು ನೀಡಿ. ಅದು ಕಾರ್ಮಿಕರಾಗಿ ನಮ್ಮ ಹಕ್ಕು.

**ಮೋದಿ ಸರ್ಕಾರದ ಖಾಸಗೀಕರಣ, ಉದಾರೀಕರಣ, ಗುತ್ತಿಗೆ, ದಿನಗೂಲಿಕರಣ ಮತ್ತು ಬಂಡವಾಳಶಾಹಿಗಳ ಲಾಭಕ್ಕಾಗಿ ಆರ್ಥಿಕತೆಯ ದುರುಪಯೋಗದ ನೀತಿಗಳೇ ನಿರುದ್ಯೋಗಕ್ಕೆ ಕಾರಣವಾಗಿದೆ. ಇದು ಭೂಕಂಪ, ಪ್ರವಾಹ, ಕಾಡ್ಗಿಚ್ಚು ಅಥವಾ ಸುನಾಮಿ ತರಹ ಪ್ರಕೃತಿಯ ವಿಕೋಪವಲ್ಲ.**

## ಭ್ರಷ್ಟಾಚಾರ ಏಕೆ ಎಲ್ಲಾ ಮಿತಿಗಳನ್ನು ಮೀರುತ್ತಿದೆ?

ಸರ್ಕಾರಗಳು ಶ್ರೀಮಂತರಿಗೆ ಲೂಟಿ ಮಾಡಲು ಅವಕಾಶ ನೀಡಿದಾಗ, ಅವರ ನಾಯಕರು ಮತ್ತು ಮಂತ್ರಿಗಳು ಏಕೆ ಹಿಂದುಳಿಯಬೇಕು? ಅವರು ಕೂಡ ಹರಿಯುವ ಗಂಗೆಯಲ್ಲಿ ಕೈತೊಳೆಯುತ್ತಾರೆ. ಮತ್ತು ಮೋದಿ ಸರ್ಕಾರದ ಅವಧಿಯಲ್ಲಿ ರಾಮನ ಹೆಸರಿನಲ್ಲೇ ಲೂಟಿ ನಡೆದಿದೆ, ಸಾಧ್ಯವಾದಷ್ಟು ಲೂಟಿ ಮಾಡಿ ಎನ್ನುವ ಘೋಷಣೆ ಜನಪ್ರಿಯವಾಗಿದೆ. ನಡತೆ, ಸಂಸ್ಕಾರ, ಚಾರಿತ್ರ್ಯದ ಬಗ್ಗೆ ಮಾತನಾಡುವ ಬಿಜೆಪಿ ಸರಕಾರದ ಭ್ರಷ್ಟಾಚಾರದ ಬೆತ್ತಲೆ ನೃತ್ಯ ನೋಡಿ ಹಳೆಯ ವೃತ್ತಿಪರ ಭ್ರಷ್ಟರೂ ತಿರುಗಿ ನೋಡಲಾರಂಭಿಸಿದ್ದಾರೆ. 10,000 ಕೋಟಿ ವ್ಯಾಪಂ ಹಗರಣ, ಸಾವಿರಾರು ಕೋಟಿ ರಫೇಲ್ ಹಗರಣ, ಅಡಾನಿ ಹಗರಣ, ನೋಟು ಬಂದಿ ಹಗರಣ, ಡಿಮ್ಯಾಟ್ ಹಗರಣ, ಡಿಡಿಸಿಎ ಹಗರಣ, ಎನ್ಪಿಎ ಹಗರಣ... ಹೀಗೆ ಪುಸ್ತಕ ತುಂಬಬಹುದಾದಷ್ಟು ಪಟ್ಟಿ ದೊಡ್ಡದಿದೆ. **ಈ ಹಗರಣಗಳಲ್ಲಿ ನಷ್ಟವಾದ ಕೋಟ್ಯಂತರ ರೂ.ಗಳೂ ಸಾರ್ವಜನಿಕರದ್ದಾಗಿತ್ತು.** ಒಂದೆಡೆ ಎಲ್ಲಾ ಶ್ರೀಮಂತರು, ಬಂಡವಾಳಶಾಹಿಗಳು ತಮ್ಮ ಖಜಾನೆ ತುಂಬಿದರೆ ಮತ್ತೊಂದೆಡೆ ಸರ್ಕಾರದ ಮಂತ್ರಿಗಳು, ಮುಖಂಡರು, ಶಾಸಕರು, ಸಂಸದರು ಹಾಗೂ ದೊಡ್ಡ ಅಧಿಕಾರಿಗಳು, ಮಧ್ಯವರ್ತಿಗಳು, ದಲ್ಲಾಳಿಗಳೂ ಕಮಿಷನ್ ದಂಧೆಯಿಂದ ಜೇಬು ತುಂಬಿಸಿಕೊಂಡಿದ್ದಾರೆ. ಆದರೆ ಈ ಎಲ್ಲಾ ಹಗರಣಗಳ ವಿರುದ್ಧ ಸೃಷ್ಟಿಯಾದ ಪ್ರತಿರೋಧದ ಧ್ವನಿಯನ್ನು ಮೋದಿ ಸರ್ಕಾರ ಕಾನೂನು ವ್ಯವಸ್ಥೆ, ಮೀಡಿಯಾ ಮತ್ತು ಅಧಿಕಾರಶಾಹಿಯನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ಹತ್ತಿಕ್ಕಿದೆ. ಇದರಲ್ಲಿ ಪೀತ ಪತ್ರಿಕೋದ್ಯಮ ವಿಶೇಷ ಪಾತ್ರ ವಹಿಸಿದೆ. **ಪೀತ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಮೀಡಿಯಾ ಏನೇ ಹೇಳಿದರೂ ಅದಕ್ಕೆ ತದ್ವಿರುದ್ಧವಾದದ್ದನ್ನು ಸ್ವೀಕರಿಸಬೇಕು ಎಂಬ ನಿಯಮ ರೂಪಿಸಬೇಕು.** ಕೇವಲ ಎನ್.ಪಿ.ಎ. (ನೋನ್ ಪರ್ಫಾರ್ಮಿಂಗ್ ಅಸೆಟ್) ಹಗರಣದ ಮೂಲಕ ಸಾರ್ವಜನಿಕರ ದುಡಿಮೆಯ 2.67 ಲಕ್ಷ ಕೋಟಿ ರೂ.ಗಳೊಂದಿಗೆ ಮೋಸಗಾರ ಬಂಡವಾಳಶಾಹಿಗಳು ಪರಾರಿಯಾಗಿದ್ದಾರೆ. ಸರ್ಕಾರದ ಒಳಒಪ್ಪಂದವಿಲ್ಲದೆ ಇದು ಸಾಧ್ಯವೇ? ಅಸಾಧ್ಯ.

**2014ರಿಂದ ಬಂಡವಾಳಶಾಹಿಗಳ 14.56 ಲಕ್ಷ ಕೋಟಿ ರು. ಸಾಲ ಮನ್ನಾ!**

## ಕೋಮುವಾದ, ಜಾತಿವಾದ ಮತ್ತು ಅಂಧ ರಾಷ್ಟ್ರೀಯತೆಯ ಅಫೀಮು ಏಕೆ ನೀಡಲಾಗುತ್ತಿದೆ?

**ಮೇಲೆ ಹೇಳಿದ ನಮ್ಮ ನೈಜ ವಿಚಾರಗಳ ಬಗ್ಗೆ ಯೋಚನೆ ಮಾಡಬಾರದೆಂದು ಸಂಘ ಪರಿವಾರ, ಬಿಜೆಪಿ ಮತ್ತು ಅವರ ಮಡಿಲಲ್ಲಿ ಕುಳಿತಿರುವ ಪೀತ ಪತ್ರಿಕೋದ್ಯಮ ನಮ್ಮನ್ನು ಮೂರು ನಕಲಿ ವಿಚಾರಗಳಲ್ಲಿ ಸಿಲುಕಿಸುತ್ತಿದೆ: ಕೋಮುವಾದ, ಜಾತಿವಾದ ಮತ್ತು ಅಂಧ ರಾಷ್ಟ್ರೀಯತೆ.** ಮಂದಿರ, ಮಸೀದಿ, ಲವ್ ಜಿಹಾದ್, ಲ್ಯಾಂಡ್ ಜಿಹಾದ್, ಗೋರಕ್ಷೆ ತರಹದ ಸುಳ್ಳನ್ನು ಹಬ್ಬಿಸಿ ನಮ್ಮ ಧಾರ್ಮಿಕ ಭಾವನೆಗಳನ್ನು ರಾಜಕೀಯ ಲಾಭಕ್ಕಾಗಿ ಉಪಯೋಗಿಸುತ್ತಾರೆ; ಮತ್ತು ಕೆಲವೊಮ್ಮೆ ಮೀಸಲಾತಿಯ ರಾಜಕೀಯವನ್ನು ಮತ್ತೆ ಬಿಸಿ ಮಾಡಿ ನಮ್ಮನ್ನು ಮೂರ್ಖರನ್ನಾಗಿಸುತ್ತಾರೆ. ಇನ್ನು ಕೆಲವೊಮ್ಮೆ ಚೀನಾ ಅಥವಾ ಪಾಕಿಸ್ತಾನದ ಬಗ್ಗೆ ಹುಸಿ ಭಯ ಹಬ್ಬಿಸಿ ಅಂಧ ರಾಷ್ಟ್ರೀಯತೆಯ ಅಲೆಯನ್ನು ಹರಡಲು ಪ್ರಯತ್ನಿಸುತ್ತಾರೆ. ಈ ಮೂರು ರೀತಿಯಿಂದ ಜನರನ್ನು ಮೂರ್ಖರನ್ನಾಗಿ ಮಾಡಲು ಪ್ರಾಯತ್ನಿಸಲಾಗುತ್ತಿದೆ.

**ಚೀನಾದಿಂದ ಭಾರತಕ್ಕೆ ನಿಜವಾಗಿಯೂ ಅಪಾಯವಿದ್ದರೆ, ಮೋದಿ ಸರ್ಕಾರದ ಕಳೆದ 5 ವರ್ಷಗಳಲ್ಲಿ ಚೀನಾದಿಂದ ಭಾರತಕ್ಕೆ ಆಮದು ಶೇಕಡಾ 30 ರಷ್ಟು ಏಕೆ ಹೆಚ್ಚಾಗಿದೆ? ಚೀನಾದೊಂದಿಗಿನ ಭಾರತದ ವ್ಯಾಪಾರ ಕೊರತೆಯು 1 ಟ್ರಿಲಿಯನ್ ಡಾಲರ್ ಗೆ ಹೇಗೆ ಹೋಗಿದೆ? ಅದೇ ರೀತಿ ಗೋಸಂರಕ್ಷಣೆ ಬಗ್ಗೆ ಬಿಜೆಪಿಗೆ ಅಷ್ಟೊಂದು ಕಾಳಜಿ ಇದ್ದರೆ ಕೇರಳ, ಈಶಾನ್ಯ ಮತ್ತು ಗೋವಾದ ಬಿಜೆಪಿ ನಾಯಕರು ಗೋಮಾಂಸ ಪೂರೈಕೆಯನ್ನು ಹೆಚ್ಚಿಸುವ ಭರವಸೆ ನೀಡುತ್ತಿರುವುದು ಏಕೆ? ಗೋಮಾಂಸ ರಫ್ತು ಮಾಡುವ ಕಸಾಯಿಖಾನೆಯ ಆಡಳಿತ ಮಂಡಳಿಯಲ್ಲಿ ಬಿಜೆಪಿಯ ಸಂಗೀತ್ ಸೋಮ್ ಏಕೆ ಇದ್ದರು? ಮೋದಿ ಸರ್ಕಾರದ ಅಡಿಯಲ್ಲಿ ಭಾರತವು ವಿಶ್ವದ ನಾಲ್ಕನೇ ಅತಿ ದೊಡ್ಡ ಗೋಮಾಂಸ ರಫ್ತುದಾರನಾಗುವುದು ಹೇಗೆ? ಲವ್ ಜಿಹಾದ್ ಬಗ್ಗೆ ಬಿಜೆಪಿ ಗಂಭೀರವಾಗಿದ್ದರೆ, ಬಿಜೆಪಿ ನಾಯಕರಾದ ಶಾನವಾಜ್ ಹುಸೇನ್, ಮುಖ್ತಾರ್ ಅಬ್ಬಾಸ್ ನಖ್ವಿ ಮತ್ತು ಅದಕ್ಕೂ ಮೊದಲು ಸಿಕಂದರ್ ಬಖ್ತ್ ತರಹದ ಹಿಂದೂ ಮಹಿಳೆಯರನ್ನು ಮದುವೆಯಾಗಿರುವ ಮುಖಂಡರ ಮನೆಗಳ ಮೇಲೆ ಸಂಘಿ ಗೂಂಡಾಗಳು ಏಕೆ ದಾಳಿ ಮಾಡಲಿಲ್ಲ? ಮುಸ್ಲಿಂ ವ್ಯಕ್ತಿಯನ್ನು ಮದುವೆಯಾಗಿರುವ ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿಯವರ ಮಗಳ ಮನೆ ಮೇಲೆ ಏಕೆ ದಾಳಿ ಮಾಡಲಿಲ್ಲ?** ಈ ಪ್ರಶ್ನೆಗಳ ಬಗ್ಗೆ ನೀವು ಎಂದಾದರೂ ಯೋಚಿಸಿದ್ದೀರಾ?

## ನಾವು ಅರ್ಥಮಾಡಿಕೊಳ್ಳಬೇಕು ...

ಇದು ಸ್ಪಷ್ಟ: **ಈ ಸಮಸ್ಯೆಗಳನ್ನು ಪ್ರಸ್ತುತ ಸರ್ಕಾರ ಮತ್ತು ಸಂಘ ಪರಿವಾರವು ನಮ್ಮಲ್ಲಿ ಅತಾರ್ಕಿಕ ಕೋಮುವಾದಿ ಚಿಂತನೆ ಮತ್ತು ಭಾವನೆಗಳನ್ನು ಹುಟ್ಟುಹಾಕಲು, ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಮತ್ತು ಏರುತ್ತಿರುವ ಹಣದುಬ್ಬರ, ನಿರುದ್ಯೋಗ, ಬಡತನ, ಅನಕ್ಷರತೆ, ಹಸಿವುಗಳಿಂದ ನಮ್ಮ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದೆ. ನಮ್ಮಲ್ಲಿ ಅನೇಕ ಅಮಾಯಕರು ಕೂಡ ಈ ವಂಚನೆಯಲ್ಲಿ ಸಿಲುಕಿದ್ದಾರೆ. ಭವಿಷ್ಯದಲ್ಲಿ ಯಾರಾದರೂ ಈ ನಕಲಿ ಸಮಸ್ಯೆಗಳನ್ನು ನಿಮಗೆ ತಿಳಿಸಿದರೆ, ಅವರಿಗೆ ಆತಿಥ್ಯ ನೀಡಿ ಬಾಗಿಲು ತೋರಿಸಿ.**

ನಾವು ಉತ್ತಮ ಭವಿಷ್ಯವನ್ನು ಬಯಸಿದರೆ, ನಾವು ನಮ್ಮ ಜೀವನದ ನೈಜ ಸಮಸ್ಯೆಗಳ ಬಗ್ಗೆ ಮಾತ್ರ ಮಾತನಾಡುತ್ತೇವೆ ಎಂದು ಪ್ರತಿಜ್ಞೆ ಮಾಡಬೇಕು. ನಾವು ನಮ್ಮ ಉದ್ಯೋಗ, ಶಿಕ್ಷಣ, ವೈದ್ಯಕೀಯ ಸೇವೆ, ವಸತಿಯ ಹಕ್ಕು, ಹಣದುಬ್ಬರ ಮತ್ತು ಭ್ರಷ್ಟಾಚಾರದಿಂದ ಬಿಡುಗಡೆ, ಕೋಮುವಾದ ಮತ್ತು ಜಾತಿವಾದದಿಂದ ಮುಕ್ತಿ - ಈ ಬಗ್ಗೆ ಮಾತ್ರ ಮಾತನಾಡುತ್ತೇವೆ ಎಂದು ನಿರ್ಧರಿಸಬೇಕು. ಈ ಎಲ್ಲಾ ಸಮಸ್ಯೆಗಳ ಮೇಲೆ ನಾವು, ಸಾಮಾನ್ಯ ದುಡಿಯುವ ಜನರು, ನಮ್ಮದೇ ಆದ ಹೋರಾಟದ ಚಳುವಳಿಗಳನ್ನು ಪ್ರಾರಂಭಿಸುತ್ತೇವೆ ಎಂದು ನಿರ್ಧರಿಸಬೇಕು. ನಮ್ಮ ಹೋರಾಟದ ಮುಖ್ಯ ಬೇಡಿಕೆಗಳು ಈ ಕೆಳಗಿನಂತಿವೆ:

• ಶಿಕ್ಷಣ-ಉದ್ಯೋಗ-ಆರೋಗ್ಯ-ವಸತಿಯ ಹಕ್ಕುಗಳನ್ನು ಮೂಲಭೂತ ಹಕ್ಕುಗಳು ಎಂದು ಘೋಷಿಸಬೇಕು. ಖಾಸಗೀಕಾರಣ ನಿಲ್ಲಬೇಕು. **ಭಗತ್ ಸಿಂಗ್ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆ** ಜಾರಿ ಮಾಡಿ ಉದ್ಯೋಗ ನೀಡಲು ಸಾಧ್ಯವಾಗದಿದ್ದಲ್ಲಿ ತಿಂಗಳಿಗೆ 10,000 ರು. ನಿರುದ್ಯೋಗ ಭತ್ಯೆ ನೀಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲಾ ಖಾಲಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. 'ಅಗ್ನಿವೀರ್' ಯೋಜನೆಯನ್ನು ಕೂಡಲೇ ರದ್ದುಗೊಳಿಸಿ ಸೇನೆಯಲ್ಲಿ ಖಾಯಂ ನೇಮಕಾತಿ ವ್ಯವಸ್ಥೆಯನ್ನು ಮರುಸ್ಥಾಪಿಸಬೇಕು.

• ಎಲ್ಲಾ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ನಾಲ್ಕು ಪ್ರಸ್ತಾವಿತ 'ಕಾರ್ಮಿಕ ಸಂಹಿತೆ'ಗಳನ್ನು ರದ್ದುಗೊಳಿಸಬೇಕು. ಗ್ರಾಮೀಣ ಕಾರ್ಮಿಕರನ್ನೂ ಕಾರ್ಮಿಕ ಕಾನೂನಿನಡಿ ತರಬೇಕು. 'ಹಳೆಯ ಪೆನ್ಷನ್ ಯೋಜನೆ'ಯನ್ನು ಮರುಸ್ಥಾಪಿಸಬೇಕು. **ಗುತ್ತಿಗೆ ಪದ್ಧತಿಯನ್ನು ಕೊನೆಗೊಳಿಸಿ ಮತ್ತು ಎಲ್ಲರಿಗೂ ಶಾಶ್ವತ (ಪರ್ಮನೆಂಟ್) ಉದ್ಯೋಗ ದೊರಕುವಂತೆ ವ್ಯವಸ್ಥೆ ಮಾಡಬೇಕು.**

• ಹಣದುಬ್ಬರವನ್ನು ತಡೆಯಲು, **ಎಲ್ಲಾ ಪರೋಕ್ಷ ತೆರಿಗೆಗಳನ್ನು ರದ್ದುಗೊಳಿಸಬೇಕು** ಮತ್ತು ಹೆಚ್ಚುತ್ತಿರುವ ಸಂಪತ್ತಿನ ಆಧಾರದ ಮೇಲೆ **ಪ್ರಗತಿಪರ ನೇರ ತೆರಿಗೆಗಳ ವ್ಯವಸ್ಥೆಯನ್ನು ಬಲವಾಗಿ ಜಾರಿಗೆ ತರಬೇಕು.**

• **ಮನರೇಗಾ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು**, ಇದರ ಅಡಿಯಲ್ಲಿ ಇಡೀ ವರ್ಷಕ್ಕೆ ಕೆಲಸ ನೀಡಲು ಅವಕಾಶ ನೀಡಬೇಕು ಮತ್ತು ಈ ಕೆಲಸಕ್ಕೆ ಕನಿಷ್ಠ ವೇತನಕ್ಕೆ ಸಮಾನವಾದ ಮೊತ್ತವನ್ನು ಒದಗಿಸಬೇಕು.

• **ಬಡ ಮತ್ತು ಮಧ್ಯಮ ರೈತರಿಗೆ** ಬೀಜಗಳು, ರಸಗೊಬ್ಬರಗಳು, ವಿದ್ಯುತ್ ಇತ್ಯಾದಿಗಳ ಮೇಲಿನ ಸಹಾಯಧನದ ಸರಿಯಾದ ವ್ಯವಸ್ಥೆಗಾಗಿ, **ಶ್ರೀಮಂತ ವರ್ಗಗಳ ಮೇಲೆ ವಿಶೇಷ ತೆರಿಗೆಗಳನ್ನು ವಿಧಿಸಬೇಕು**, ನೀರಾವರಿ ವ್ಯವಸ್ಥೆ ಮತ್ತು **ಸಾಂಸ್ಥಿಕ ಸಾಲವನ್ನು** ಸಹ ಸರಿಯಾಗಿ ವ್ಯವಸ್ಥೆಗೊಳಿಸಬೇಕು.

• "ಸರ್ವ ಧರ್ಮ ಸಮ ಭಾವ" ಎಂಬ ನಕಲಿ ಸೆಕ್ಯುಲರಿಸಂ ಬದಲಿಗೆ **ನಿಜವಾದ ಜಾತ್ಯತೀತ ರಾಜ್ಯವನ್ನು ಖಚಿತಪಡಿಸಿಕೊಳ್ಳಲು ಶಾಸನವನ್ನು ತರಬೇಕು.** ಯಾವುದೇ ನಾಯಕ ಅಥವಾ ಪಕ್ಷವು ಸಾರ್ವಜನಿಕ ಜೀವನದಲ್ಲಿ ಧರ್ಮ, ಸಮುದಾಯ ಅಥವಾ ನಂಬಿಕೆಯ ಯಾವುದೇ ಉಲ್ಲೇಖ ಅಥವಾ ಬಳಕೆಯನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸಬೇಕು.

• ಅಸ್ಪೃಶ್ಯತೆ ಮಾತ್ರವಲ್ಲದೆ ಪ್ರತಿಯೊಂದು ರೂಪದಲ್ಲೂ ಜಾತಿ ತಾರತಮ್ಯವನ್ನು ಸಂವಿಧಾನ ತಿದ್ದುಪಡಿಯ ಮೂಲಕ ಶಿಕ್ಷಾರ್ಹ ಅಪರಾಧವೆಂದು ಘೋಷಿಸಬೇಕು.

• ಚುನಾವಣಾ ಪಕ್ಷಗಳ ಮತ್ತು ಸರ್ಕಾರದ ಭ್ರಷ್ಟಾಚಾರವನ್ನು ನಿಲ್ಲಿಸಬೇಕು ಮತ್ತು ಅವರ **ಸಾರ್ವಜನಿಕ ಆಡಿಟ್ ಮತ್ತು ತನಿಖೆಗೆ ವ್ಯವಸ್ಥೆ** ಮಾಡಬೇಕು.

• **ಮಹಿಳೆಯರ ಮೇಲಿನ ಪ್ರತಿಯೊಂದು ರೀತಿಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ತಾರತಮ್ಯವನ್ನು ನಿಲ್ಲಿಸಲು ಕಠಿಣ ಕಾನೂನುಗಳನ್ನು ತರಬೇಕು.**

• **ಧಾರ್ಮಿಕ ಮತ್ತು ಜಾತಿ ಸಾಮರಸ್ಯವನ್ನು ಪ್ರಚೋದಿಸುವ ಮತ್ತು ಕೋಮುಗಲಭೆ ಮತ್ತು ಗುಂಪು ಹತ್ಯೆಗಳಲ್ಲಿ (ಮೊಬ್-ಲೀನಚಿಂಗ್) ಸಕ್ರಿಯವಾಗಿರುವ ಎಲ್ಲಾ ರೀತಿಯ ಸಂಘಟನೆಗಳು ಮತ್ತು ಪಕ್ಷಗಳನ್ನು ತಕ್ಷಣವೇ ನಿಷೇಧಿಸಬೇಕು ಮತ್ತು ಭಯೋತ್ಪಾದಕರು ಎಂದು ಘೋಷಿಸಬೇಕು** ಮತ್ತು ಅವರ ನಾಯಕರು ಮತ್ತು ಹಿಂಬಾಲಕರ ವಿರುದ್ಧ ತಕ್ಷಣ ಕಠಿಣ ಕ್ರಮ ತೆಗೆದುಕೊಳ್ಳಬೇಕು.

ಸ್ನೇಹಿತರೇ! ಮೇಲಿನ ಎಲ್ಲಾ ಬೇಡಿಕೆಗಳು ನಮ್ಮ ಜೀವನಕ್ಕೆ ಸಂಬಂಧಿಸಿದ ಮೂಲಭೂತ ಬೇಡಿಕೆಗಳಾಗಿವೆ. ಇವು ಪ್ರಾಯೋಗಿಕ ಬೇಡಿಕೆಗಳು. ಇವುಗಳನ್ನು ಖಂಡಿತ ಪೂರ್ಣಗೊಳಿಸಬಹುದು. ಪ್ರಪಂಚದ ಕೆಲವು ದೇಶಗಳಲ್ಲಿ ಜನರು ಈ ಅನೇಕ ಹಕ್ಕುಗಳನ್ನು ಸಾಧಿಸಿದ್ದಾರೆ, ಏಕೆಂದರೆ ಅಲ್ಲಿಯ ಜನರು ಅವರ ಅಧಿಕಾರಕ್ಕಾಗಿ ಹೋರಾಡಿದರು. ಇದು ಸಮಾಜದ ಕ್ರಾಂತಿಕಾರಿ ಪರಿವರ್ತನೆಗಾಗಿ ಬೇಕಾದ ಸುದೀರ್ಘ ಹೋರಾಟದಲ್ಲಿ ಒಂದು ಆರಂಭಿಕ ಹೆಜ್ಜೆ. ಈ ಬೇಡಿಕೆಗಳಿಗಾಗಿ ಯಾವುದೇ ಚುನಾವಣಾವಾದಿ ಪಕ್ಷ ಹೋರಾಟ ನಡೆಸುವುದಿಲ್ಲ. ಕಾರಣವೆಂದರೆ ಕಾಂಗ್ರೆಸ್, ಎಎಪಿ, ಎಸ್ಪಿ, ಬಿಎಸ್ಪಿ, ಶಿವಸೇನೆ, ಎನ್ಸಿಪಿ, ಆರ್ಜೆಡಿ, ಜೆಡಿಯು, ಜೆಡಿ(ಎಸ್ಇಸಿ), ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಲಿಬ್., ಬಿಆರ್ಎಸ್, ವೈಎಸ್ಆರ್ ಕಾಂಗ್ರೆಸ್, ಅಕಾಲಿ ದಳ ತರಹದ ಎಲ್ಲಾ ಚುನಾವಣಾವಾದಿ ಪಕ್ಷಗಳು ತಮ್ಮ ಪಕ್ಷದ ನಿಧಿಗಾಗಿ ಶ್ರೀಮಂತರು ಮತ್ತು ಬಂಡವಾಳಶಾಹಿಗಳಿಂದ ಚಂದಾ ಸಂಗ್ರಹಿಸುತ್ತಿದ್ದಾರೆ ಮತ್ತು ಅಧಿಕಾರಕ್ಕೆ ಬಂದ ಮೇಲೆ ಅವರಿಗೋಸ್ಕರನೇ ಕಾನೂನನ್ನು ವಿವಿಧ ರೀತಿಯಲ್ಲಿ ಬದಲಾಯಿಸುತ್ತಾರೆ. ಈ ಹೊತ್ತಿನಲ್ಲಿ ದೇಶವನ್ನು ಆಳುವ ಬಂಡವಾಳಶಾಹಿ ವರ್ಗಕ್ಕೆ ಫ್ಯಾಸಿಸ್ಟ್ ಬಿಜೆಪಿಯ ಅವಶ್ಯಕತೆ ಹೆಚ್ಚು ಏಕೆಂದರೆ ಅವರಿಗೆ ನಮ್ಮನ್ನು ಜಾತಿ ಧರ್ಮದ ಹೆಸರಿನಲ್ಲಿ ನಮ್ಮ ನಮ್ಮಲ್ಲಿಯೇ ಹೊಡೆದಾಡಿಕೊಳ್ಳುವಂತೆ ಮಾಡಿ ತಮ್ಮ ಸರ್ವಾಧಿಕಾರಿ ಆಡಳಿತದ ಮೂಲಕ ನಮ್ಮ ಮೇಲೆ ಜನವಿರೋಧಿ ನೀತಿಗಳನ್ನು ಹೇರುವುದು ಹೇಗೆ ಎಂದು ತಿಳಿದಿದೆ.

**ಆದ್ದರಿಂದ ಇಂದು ದೇಶದ ದುಡಿಯುವ ಜನರು ಈ ಬೇಡಿಕೆಗಳ ಮೇಲೆ ತಮ್ಮದೇ ಆದ ಯುದ್ಧನಿರತ ಜನಾಂದೋಲನವನ್ನು ಆರಂಭಿಸಬೇಕು, ಈಗಿನ ಜನವಿರೋಧಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು. 2024 ರಲ್ಲಿ ಯಾವುದೇ ಸರ್ಕಾರ ಬರಲಿ, ಅವರು ನಮ್ಮ ಹೋರಾಟ ಮತ್ತು ನಮ್ಮ ಬೇಡಿಕೆಗಳನ್ನು ನಿರ್ಲಕ್ಷಿಸದಂತೆ ನೋಡಿಕೊಳ್ಳಬೇಕು.** ಜನರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಸರ್ಕಾರವನ್ನು ಕಿತ್ತೊಗೆಯುವುದು ನಮ್ಮ ಹಕ್ಕು ಮಾತ್ರವಲ್ಲ ಕರ್ತವ್ಯವೂ ಆಗಿದೆ ಎಂದು ಶಹೀದ್-ಎ-ಆಜಂ ಭಗತ್ ಸಿಂಗ್ ಹೇಳಿದ್ದರು. **ಶಹೀದ್-ಎ-ಆಜಮ್ ಅವರ ಈ ಸಂದೇಶವನ್ನು ಕಾರ್ಯಗತಗೊಳಿಸುವ ಸಮಯ ಇಂದು. ಬನ್ನಿ, ನಮ್ಮ ಅಭಿಯಾನಕ್ಕೆ, ನಮ್ಮ ಆಂದೋಲನಕ್ಕೆ ಸೇರಿಕೊಳ್ಳಿ ಮತ್ತು ಉತ್ತಮ ಭವಿಷ್ಯಕ್ಕಾಗಿ ಈ ಹೋರಾಟಕ್ಕೆ ಕೈ ಜೋಡಿಸಿ!**

# ಭಾರತದ ಕ್ರಾಂತಿಕಾರಿ ಕಾರ್ಮಿಕರ ಪಕ್ಷ (RWPI)

## ದಿಶಾ ವಿದ್ಯಾರ್ಥಿ ಸಂಘಟನೆ | ನೌಜವಾನ ಭಾರತ ಸಭೆ | ಸ್ತ್ರೀ ಮುಕ್ತಿ ಲೀಗ್

BHAGAT SINGH JAN ADHIKAR YATRA
BSJAY

**ದೆಹಲಿ** : 9289498250, 9693469694; **ಉತ್ತರ ಪ್ರದೇಶ** : 8858288593, 9891951393; **ಹರಿಯಾಣ** : 8010156365, 8685030984; **ಮಹಾರಾಷ್ಟ್ರ** : 7798364729, 9619039793; **ಬಿಹಾರ** : 6297974751, 7070571498; **ಉತ್ತರಾಖಂಡ** : 9971158783, 7042740669; **ಪಂಜಾಬ್** : 9888080820; **ಆಂಧ್ರ ಪ್ರದೇಶ** : 7995828171, 8500208259; **ತೆಲಂಗಾಣ** : 9971196111; **ಚಂಡೀಗಢ** : 8196803093

@bsjayatra 9582712837